Ex.2/2018 R.W.1

ದಿನಾಂಕ 08.03.2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ DHR ಪರ ಮಾನ್ಯ ಶ್ರೀ GMV ವಕೀಲರಿಂದಃ

ನಿಪಿ.55 ಭಾವಚಿತ್ರದಲ್ಲಿ ಕಾಣುತ್ತಿರುವ ಗೇಟ್ ನ ಹಿಂಬದಿಯಲ್ಲಿರುವ ಮನೆ DHR ರವರ ಮನೆ ಆಗಿರುತ್ತದೆ. ನಿಪಿ.55 ರಲ್ಲಿ ಗೇಟ್ ನ ಪಕ್ಕದಲ್ಲಿ ಕಾಣಿಸುತ್ತಿರುವ ಮನೆ DHR ರವರದ್ದು. ನಿಪಿ.55 ರಲ್ಲಿ ಕಾಣುತ್ತಿರುವ ಹೊಸದಾಗಿ ಸೀಮೆಂಟ್ ಮಾಡಿರುವ RCC ಬಿಲ್ಡಿಂಗ್ ಹಾಗೂ ಅದರ ಪಕ್ಕದಲ್ಲಿ ಇರುವ ಅಂಚಿನ ಕೊಟ್ಟಿಗೆ ನನ್ನದಾಗಿರುತ್ತದೆ. ನಿಪಿ.55 ರಲ್ಲಿ ಕಾಣುತ್ತಿರುವ ಹಳದಿ ಬಣ್ಣದ ಬಿಲ್ಡಿಂಗ್ ಮತ್ತು ಹೊಸದಾಗಿ plastering ಮಾಡಿರುವ ಬಿಲ್ಡಿಂಗ್ ನ ನಡುವೆ ಈಗಲೂ ಸಹ ಖಾಲಿ ಜಾಗ ಇರುತ್ತದೆ.

ನಮ್ಮ ಮನೆಗೂ ಹಾಗೂ DHR ರವರ ಮನೆಗೆ ಮಧ್ಯದಲ್ಲಿ ಒಂದುವರೆ ಅಡಿ ಜಾಗ ಇರುತ್ತದೆ. ನಿಪಿ.55 ರಲ್ಲಿ ಕಾಣುತ್ತಿರುವ ಖಾಲಿ ಜಾಗವು 16 x 80 ಅಡಿ ವಿಸ್ತೀರ್ಣ ಇರುತ್ತದೆ. ಈಗ ಸದರಿ ಜಾಗದಲ್ಲಿ ಕಟ್ಟಡ ಆಗಿರುತ್ತದೆ ಎಂದರೆ ಸರಿ. ಸದರಿ ಖಾಲಿ ಜಾಗದಲ್ಲಿ ನಾನು ಹೊಸದಾಗಿ ಕಟ್ಟಡ ಕಟ್ಟಿರುತ್ತೇನೆ ಎಂದರೆ ಸರಿಯಲ್ಲ, ಮುಂಚೆಯೇ ಮನೆ ಇರುತ್ತದೆ. ಆ ರೀತಿ ಮುಂಚೆ ಕಟ್ಟಡ ಇದ್ದ ಬಗ್ಗೆ ಭಾವಚಿತ್ರಗಳನ್ನು ಪಂಚಾಯಿತಿಗೆ ನೀಡಿರುತ್ತೇನೆ. ಸದರಿ ಭಾವಚಿತ್ರಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಬಹುದು ಎಂದರೆ ಸರಿ.

DHR ರವರು ನನ್ನ ವಿರುದ್ಧ ದಾವೆಯನ್ನು ಹೂಡಿರುವ ಸ್ವತ್ತು ನನ್ನ ಬಳಿ ಇರುತ್ತದೆ ಎಂದರೆ ಸರಿಯಲ್ಲ. DHR ರವರು ನನ್ನ ವಿರುದ್ಧ ಹಿಂದೆ ಹೂಡಿದ ದಾವೆಯ ಸ್ವತ್ತಿನ ಚಕ್ಕುಬಂದಿಃ ಪೂರ್ವಕ್ಕೆ DHR ರವರ ಮನೆ, ಪಶ್ಚಿಮಕ್ಕೆ ಸತೀಶ ರವರ ಮನೆ, ಉತ್ತರಕ್ಕೆ ಮುನಿಸಿಪಾಲ್ ರಸ್ತೆ, ದಕ್ಷಿಣಕ್ಕೆ ವೆಂಕಟೇಗೌಡರ ಜಾಗ ಬರುತ್ತದೆ. ನಿಪಿ.55 ರಲ್ಲಿ ಕಾಣುತ್ತಿರುವ ಸೀಮೆಂಟ್ ನ ಮನೆಯ ಪಶ್ಚಿಮಕ್ಕೆ ಸತೀಶ ರವರ ಮನೆ ಬರುತ್ತದೆ. ಈಗ ನಿಪಿ.55 ರಲ್ಲಿ ಕಾಣುತ್ತಿರುವ ಸೀಮೆಂಟ್ ನ ಮನೆಯನ್ನು ಹಾಗೂ ಸದರಿ ಮನೆಯ ಜಾಗವನ್ನು ನಾನು ಕೊಂಡುಕೊಂಡಿರುತ್ತೇನೆ. ನನ್ನ ಜಾಗ 16 x 80 ಅಡಿ ವಿಸ್ತೀರ್ಣ ಇರುತ್ತದೆ. ಅದನ್ನು ಹೊರತುಪಡಿಸಿ ಬೇರೆ ಜಾಗ ನನಗೆ ಇರುವುದಿಲ್ಲ ಎಂದರೆ ಸರಿ.

ನನಗೂ ಹಾಗೂ DHR ರವರ ನಡುವೆ ಮೇಲೆ ಹೇಳಿದ ಆಸ್ತಿಗೆ ಸಂಬಂಧಪಟ್ಟಂತೆ ವಿವಾದ ಬಂದಿರುತ್ತದೆ ಎಂದರೆ ಆ ಜಾಗವೇ ಬೇರೆ ಈ ಜಾಗವೇ ಬೇರೆ. ಇನ್ನೊಂದು ಜಾಗ ಇರುವ ಬಗ್ಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಇನ್ನೊಂದು ಜಾಗ ಇರುವುದಿಲ್ಲ ಎಂದರೆ ಸರಿಯಲ್ಲ.

ನಿಆರ್.1 ನ್ನು ಕೊಟ್ಟಿಗೆ ಇದ್ದಾಗಲೇ ತೆಗೆದಿರುತ್ತೇವೆ. ನಿಆರ್.1 ರಲ್ಲಿ ಕಾಣುತ್ತಿರುವ ತಂತಿ ಬೇಲಿಯ ಜಾಗವನ್ನು ನಮಗೆ ಬಿಟ್ಟು ಕೊಟ್ಟಿರುತ್ತಾರೆ. ನಿಆರ್.1 ರಲ್ಲಿ ಕಾಣುತ್ತಿರುವ ಪೌಂಡೇಶ್ ಹಾಕಿರುವ ಜಾಗಕ್ಕೆ ಹಾಗೂ DHR ರವರ ಜಾಗದ ಮಧ್ಯೆ ಒಂದುವರೆ ಅಡಿ ಜಾಗ ಇರುತ್ತದೆ. ತಂತಿ ಬೇಲಿಯಿಂದ DHR

ರವರ ಮನೆಯ ನಡುವೆ ಮಧ್ಯ ಎಷ್ಟು ಜಾಗ ಇರುತ್ತದೆ ಎಂದು ನನಗೆ ಗೊತ್ತಿಲ್ಲ. ನನ್ನ ತಂದೆಯ ಹೆಸರಿನಲ್ಲಿ ಬೇರೆ ಆಸ್ತಿ ಹಾಗೂ ಮನೆಗಳು ಇತ್ತು ಎಂದರೆ ಸರಿಯಲ್ಲ. ನನ್ನ ತಂದೆಯ ಹೆಸರು ರಂಗಪ್ಪ.

ನನ್ನ ತಂದೆಯ ಹೆಸರಿನಲ್ಲಿ ಈಗಲೂ ಸಹ ಮನೆ ಹಾಗೂ ಆಸ್ತಿ ಇರುತ್ತದೆ ಎಂದರೆ ಸರಿಯಲ್ಲ. ನನ್ನ ತಂದೆ ನನ್ನ ಜೊತೆ ವಾಸವಾಗಿರುವುದಿಲ್ಲ ಎಂದರೆ ಸರಿ. ನಾವು ಬೇರೆಯಾದ ನಂತರ ನಿಪಿ.55 ರಲ್ಲಿ ಕಾಣುವ ಸೀಮೆಂಟ್ ಮನೆಯನ್ನು ತೆಗೆದುಕೊಂಡಿರುತ್ತೇನೆ ಎಂದರೆ ಆ ಮನೆ ಮೊದಲೇ ಇತ್ತು.

ವಾದಿಯ ಪರವಾಗಿ ಡಿಕ್ರಿಯಾದ ಜಾಗದಲ್ಲಿ ನಾನು ಬಲವಂತವಾಗಿ ಮನೆಯನ್ನು ಕಟ್ಟಿರುತ್ತೇನೆ ಎಂದರೆ ಸರಿಯಲ್ಲ. ವಾದಿಯ ಪರವಾಗಿ ಡಿಕ್ರಿಯಾದ ಜಾಗ ಬೇರೆ ಈ ಜಾಗ ಬೇರೆ ಎಂದು ತೋರಿಸಲು ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ.

ನನ್ನ ಬಳಿ ಇನ್ನೊಂದು ಜಾಗ ಇದ್ದು ಅದನ್ನು dhr ರವರಿಗೆ ಬಿಟ್ಟುಕೊಟ್ಟಿದ್ದೆನೆಂದು ತೋರಿಸಲು ನಾನು ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಮುಂಚೆಯೇ ಬಿಟ್ಟು ಕೊಟ್ಟಿರುತ್ತೇನೆ. ನನ್ನ ಬಳಿ ಇನ್ನೊಂದು ಜಾಗ ಇದೆ ಎಂದು ಅಸಲು ದಾವಾ ಸಂಖ್ಯೆ 23/2002 ರಲ್ಲಿ ತಿಳಿಸಿರುವುದಿಲ್ಲ ಎಂದರೆ ಸರಿಯಲ್ಲ.

ನಾನು DHR ರವರಿಂದ ಯಾವುದೇ ಆಸ್ತಿಯನ್ನು ಖರೀದಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು DHR ರವರಿಂದ ಖರೀದಿ ಮಾಡಿದ ಜಾಗದ ಪಶ್ಚಿಮಕ್ಕೆ ಸತೀಶ ರವರ ಮನೆ, ಪೂರ್ವಕ್ಕೆ DHR ರವರ ಮನೆ, ಉತ್ತರಕ್ಕೆ ರಸ್ತೆ, ದಕ್ಷಿಣಕ್ಕೆ ವೆಂಕಟೇಗೌಡರ ಜಮೀನು. ಸತೀಶ ರವರ ಮನೆಯಾದ ನಂತರ ರಂಗಪ್ಪ ನವರ ಮನೆ ಬರುತ್ತದೆ.

DHR ರವರ ಮನೆಯಾದ ನಂತರ ಪೂರ್ವಕ್ಕೆ ಹಿರಿಯಣ್ಣ ಶೆಟ್ಟರ ಮನೆ ಬರುತ್ತದೆ. ಕೃಷ್ಣಪ್ಪ ರವರ ಮನೆ ಎಲ್ಲಿ ಬರುತ್ತದೆ ಎಂದು ನನಗೆ ಗೊತ್ತಿಲ್ಲ. ಸತೀಶ ರವರದ್ದು ಬಾಡಿಗೆ ಮನೆಯೋ ಸ್ವಂತ ಮನೆಯೋ ಎಂದು ನನಗೆ ಗೊತ್ತಿಲ್ಲ. ನಾನು ಹೇಳುವ ಹಾಗೇ DHR ರವರಿಂದ ಖರೀದಿ ಮಾಡಿದ ಜಾಗದ ಕ್ರಯ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿರುತ್ತೇನೆ ಆದರೆ ಅದರ ಮೂಲ ದಾಖಲೆ DHR ರವರ ಬಳಿ ಇರುತ್ತದೆ. ನನಗೆ DHR ರವರು ಮಾರಾಟ ಮಾಡಿದ ಜಾಗದಲ್ಲಿ ನಾನು ಮನೆಯನ್ನು ಕಟ್ಟಿರುತ್ತೇನೆ. ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. DHR ರವರು ಊರಿನಲ್ಲಿ ಇಲ್ಲದೇ ಇದ್ದಾಗ ಅತಿಕ್ರಮ ಪ್ರವೇಶ ಮಾಡಿ ಮನೆಯನ್ನು ಕಟ್ಟಿರುತ್ತೇನೆ ಎಂದರೆ ಸರಿಯಲ್ಲ.

ನಾನು ಸದರಿ ಮನೆಯನ್ನು ಕಟ್ಟುವಾಗ ಪರವಾನಿಗೆ ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಪಟ್ಟಣ ಪಂಚಾಯಿತಿಯಲ್ಲಿ ನನ್ನ ಹೆಸರಿನಲ್ಲಿ ಯಾವುದೇ ದಾಖಲೆಗಳು ಇರುವುದಿಲ್ಲ ಎಂದರೆ ಸರಿಯಲ್ಲ. ಕಂದಾಯ ಪಾವತಿಸಿದ ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ.

DHR ರವರು ನನ್ನ ವಿರುದ್ಧ ದಾವೆಯನ್ನು ಹೂಡಿದ ನಂತರ ನಾನು ಪಟ್ಟಣ ಪಂಚಾಯಿತಿಗೆ ಹೋಗಿ ಸ್ವಯಂ ಘೋಷಿತವಾಗಿ ನನ್ನ ಆಸ್ತಿಯನ್ನು ಘೋಷಣೆ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಪಟ್ಟಣ ಪಂಚಾಯಿತಿಯವರು ನನ್ನ ಆಸ್ತಿಗೆ Assessment ನಂಬರ್ ಅನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಪಟ್ಟಣ ಪಂಚಾಯಿತಿಯಲ್ಲಿ ನಾನು DHR ರವರ Assessment ನಂಬರ್ ಅನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ.

ಪಟ್ಟಣ ಪಂಚಾಯಿತಿಯಲ್ಲಿ ಆಸ್ತಿ ವಿವರಣೆ ಪಟ್ಟಿಯಲ್ಲಿ ನನ್ನ ಆಸ್ತಿಯ ವಿವರಣೆ ಇರುವುದಿಲ್ಲ ಎಂದರೆ ಸರಿಯಲ್ಲ. ಕಂದಾಯ ರಶೀದಿಯಲ್ಲಿಯೂ ಸಹ Assessment ನಂಬರ್ ನಮೂದು ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ಯಾವ ದಾಖಲೆಗಳಲ್ಲಿ ಎಲ್ಲಿಯೂ ಸಹ ನಾನು ಆಸ್ತಿಯ ಚಕ್ಕುಬಂದಿ ನಮೂದು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು DHR ರವರ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ಸೃಷ್ಟಿಸಿಕೊಂಡ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ.

ನಿಆರ್.7 ನ್ನು ನಾನು ಸೃಷ್ಟಿ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಿಆರ್ 6 Dhr ರವರ ಕುಟುಂಬಕ್ಕೆ ಸೇರಿದ ಆಸ್ತಿಗೆ ಸಂಬಂಧಪಟ್ಟಿರುತ್ತದೆ ಎಂದರೆ ಸರಿಯಲ್ಲ. ನಿ ಆರ್ 4 ಮತ್ತು 5 DHR ರವರ ಆಸ್ತಿಗೆ ಸಂಬಂಧಪಟ್ಟಿದ್ದು ಎಂದರೆ ನನಗೆ ಗೊತ್ತಿಲ್ಲ. ನಿ ಆರ್ 4 ಮತ್ತು 5 ರ ಆಸ್ತಿ ಎಲ್ಲಿ ಇರುತ್ತದೆ ಎಂದು ನನಗೆ ಗೊತ್ತಿಲ್ಲ. ನಿ ಆರ್ 6 ರ ಆಸ್ತಿ ಎಲ್ಲಿ ಇರುತ್ತದೆ ಎಂದು ನನಗೆ ಗೊತ್ತಿಲ್ಲ. ನಿಆರ್ 22, 23, 24 ರಲ್ಲಿ DHR ರವರ ಕಟ್ಟಡ ಕಾಣುತ್ತಿದೆ ಎಂದರೆ ಸರಿ.

ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು, ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿಯಾಗಿದೆ ಎಂದು ಒಪ್ಪಿರುತ್ತಾರೆ.

ಸಾಕ್ಷಿ ಸಹಿಃ

ಸಿವಿಲ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಧೀಶರು,
ನ.ರಾ. ಪುರ.